SC No. 9/2024
PW.-01

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 9/2024

| | | |
|---|---|---|
| ಸಾಕ್ಷಿದಾರರ ಹೆಸರು | ವಿನೋದ್ ಕುಮಾರ್ | ಪ್ರಮಾಣ ವಚನ ಮಾಡಿದ ದಿನಾಂಕ: 01.09.2025 |
| ತಂದೆಯ/ಗಂಡನ ಹೆಸರು | ಶಿವಕುಮಾರ್ | |
| ವಯಸ್ಸು | 24 ವರ್ಷ | |
| ವೃತ್ತಿ | ಡ್ರೈವಿಂಗ್ ಕೆಲಸ | ಪ್ರಾ.ಸಾಃ 01 |
| ವಾಸ ಸ್ಥಳ | ಪಡುವಾರಹಳ್ಳಿ, ಮೈಸೂರು | ಚಾ.ಸಾಃ 04 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಚಾಸಾ–1 ನನಗೆ ಚಿಕ್ಕಪ್ಪನಾಗಬೇಕು. ಚಾಸಾ–2 ಮತ್ತು 3 ನನಗೆ ಗೊತ್ತು ಅವರುಗಳು ಚಾಸಾ–1 ರವರು ಸ್ನೇಹಿತರಿರುತ್ತಾರೆ. ನ್ಯಾಯಾಲಯದ ಮುಂದೆ ಈ ದಿನ ಹಾಜರಿರುವ 1 ನೇ ಆರೋಪಿ ಗೊತ್ತು. ಅದೇ ರೀತಿ ನ್ಯಾಯಾಲಯಕ್ಕೆ ಗೈರು ಹಾಜರಿರುವ 2 ನೇ ಆರೋಪಿ ಗೊತ್ತು. ನೋಡಿದರೆ ಗುರುತಿಸುತ್ತೇನೆ. (ಈ ದಿನ 2 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, ಆರೋಪಿ ಪರ ವಕೀಲರು 2 ನೇ ಆರೋಪಿತನ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.) ಚಾಸಾ–5 ನನ್ನ ಚಿಕ್ಕಮ್ಮ. ಚಾಸಾ–1 ಆಟೋ ನಡೆಸಿಕೊಂಡಿದ್ದರು. ನಾವು ಮತ್ತು ನನ್ನ ಚಿಕ್ಕಪ್ಪನ ಕುಟುಂಬದವರು ಒಟ್ಟಿಗೆ ವಾಸವಾಗಿದ್ದೆವು.

ದಿನಾಂಕ 26.07.2022 ರಂದು ಮಧ್ಯಾಹ್ನ 1.30–2.00 ಗಂಟೆ ಸುಮಾರಿಗೆ ನನ್ನ ಚಿಕ್ಕಪ್ಪ ಆಟೋ ತೆಗೆದುಕೊಂಡು ಹೋಗಿದ್ದರು. ಅದೇ ದಿನ ರಾತ್ರಿ 10.30 ಸುಮಾರಿಗೆ ನನ್ನ ಚಿಕ್ಕಪ್ಪ ಚಿಕ್ಕಮ್ಮನಿಗೆ ಫೋನ್ ಮಾಡಿ ತಿಲಕ್ ನಗರದ ಶನಿಮಾಹತ್ಮ ಆರ್ಚ್ ನ ಬಳಿ ಮಚ್ಚಿನಲ್ಲಿ ತಲೆಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ ಬಂದು ಉಳಿಸಿಕೊಳ್ಳಿ ಎಂದು ಫೋನ್ ಮಾಡಿದ್ದರು. ಆ ವೇಳೆಯಲ್ಲಿ ನಾನು ಮನೆಯಲ್ಲಿಯೇ ಇದ್ದೆ. ಆಗ ಚಿಕ್ಕಮ್ಮ ನನಗೆ ಶನಿಮಹಾತ್ಮ ಆರ್ಚ್ ಬಳಿ ಕೂಡಲೇ ಹೋಗುವಂತೆ ತಿಳಿಸಿದ್ದರು. ಆದ್ದರಿಂದ ನಮ್ಮ ಏರಿಯಾದ ಸರ್ಕಲ್ ನಲ್ಲಿ ಇದ್ದಂಹತ ಅನಿಲ್ ಮತ್ತು ನಾನು ಕೂಡಿ ದ್ವಿಚಕ್ರ ವಾಹನದಲ್ಲಿ ತಿಲಕ್ ನಗರದ ಶನಿಮಹಾತ್ಮ ಆರ್ಚ್ ನ ಬಳಿ ಹೋಗಿದ್ದೆವು. ನಾವು ಸ್ಥಳಕ್ಕೆ 5 ನಿಮಿಷದ ಒಳಗಾಗಿ ಹೋಗಿದ್ದೆವು. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಆರ್ಚ್ ನ ಪಕ್ಕ ಇದ್ದಂತಹ ಕಾಂಕ್ರೀಟ್ ರಸ್ತೆಯ ಮಧ್ಯದಲ್ಲಿ ಬಿದ್ದಿದ್ದರು. ಬಲಭಾಗದ ಮೊಣಕಾಲಿನಿಂದ ಕೆಳಭಾಗಕ್ಕೆ ಮಚ್ಚಿನಿಂದ ಹೊಡೆದಿದ್ದರು ಮತ್ತು ತಲೆಯ ಹಿಂಬದಿಯಲ್ಲಿ ಮಚ್ಚಿನಿಂದ ಹೊಡೆದಿದ್ದರಿಂದ ಓಪನ್ ಆಗಿತ್ತು. ನನ್ನ ಚಿಕ್ಕಪ್ಪ ಬಿದ್ದಿದ್ದ ಸ್ಥಳದಲ್ಲಿ ರಕ್ತ ಇತ್ತು. ಆಗ ಅಲ್ಲಿಗೆ ಗರುಡ ಪೊಲೀಸ್ ಬಂದಿತ್ತು. ಲಗೇಜ್ ಆಟೋದಲ್ಲಿ ನಾನು ಮತ್ತು ಅನಿಲ್ ಕುಮಾರ್ ಚಾಸಾ–1 ರವರನ್ನು ಹಾಕಿಕೊಂಡು ಕೆ.ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ನನ್ನ ಚಿಕ್ಕಮ್ಮ ಆಸ್ಪತ್ರೆಗೆ ಬಂದಿದ್ದರು. ಪರೀಕ್ಷಿಸಿದ ವೈದರು ಚಾಸಾ–1 ರವರಿಗೆ ಕಾಲು ಮುರಿದಿರುತ್ತದೆ ಇಲ್ಲಿ ಆಗುವುದಿಲ್ಲ ಎಂದು ಹೇಳಿದರು ಆದ್ದರಿಂದ ಡಿ.ಆರ್.ಎಂ ಆಸ್ಪತ್ರೆಗೆ ಚಾಸಾ–1 ರವರನ್ನು

ಕರೆದುಕೊಂಡು ಹೋಗಿದ್ದೆವು. ಡಿ.ಆರ್.ಎಂ ಆಸ್ಪತ್ರೆಯಲ್ಲಿ ನನ್ನ ಚಿಕ್ಕಪ್ಪನಿಗೆ ವೈದ್ಯರು ಚಿಕಿತ್ಸೆ ಕೊಟ್ಟಿದ್ದರು. ಡಿ.ಆರ್.ಎಂ ಆಸ್ಪತ್ರೆಗೆ ಪೊಲೀಸರು ಬಂದಿದ್ದರು ನನ್ನ ಚಿಕ್ಕಪ್ಪನ ಹೇಳಿಕೆಯನ್ನು ಪಡೆದುಕೊಂಡಿದ್ದರು. ನನ್ನ ಚಿಕ್ಕಪ್ಪನ ಸ್ನೇಹಿತ ವಿಜಯ್ ಚಾಸಾ–2 ರವರು ತನ್ನ ಮೊಬೈಲ್ ಅನ್ನು 1 ನೇ ಆರೋಪಿತನ ಕಡೆ 2,000/– ರೂಗಳಿಗೆ ಅಡವು ಇಟ್ಟಿದ್ದರಂತೆ. ಚಾಸಾ–1 ಮತ್ತು 2 ರವರು 1 ನೇ ಆರೋಪಿತನ ಕಡೆ ಮೊಬೈಲ್ ಪಡೆದುಕೊಳ್ಳಲು ಹೋದಾಗ ಅಲ್ಲಿ ಮೊಬೈಲ್ ವಿಚಾರವಾಗಿ ಬಡ್ಡಿ ಕೊಡುವಂತೆ 1 ನೇ ಆರೋಪಿ ಕೇಳಿದ್ದು ಅದಕ್ಕೆ ಚಾಸಾ–2 ರವರು ಕೊಡುವುದಿಲ್ಲ ಎಂದು ಹೇಳಿದ್ದರಿಂದ ಗಲಾಟೆ ಆಗಿತ್ತು. ಆರೋಪಿತರು ಚಾಸಾ–2 ರವರಿಗೆ ಹೊಡೆಯುತ್ತಿದ್ದಾಗ ನನ್ನ ಚಿಕ್ಕಪ್ಪ ಚಾಸಾ–1 ರವರು ಆರೋಪಿತರಿಗೆ ನೀವು ಏಕೆ ಚಾಸಾ–2 ರವರಿಗೆ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಆರೋಪಿತರು ನನ್ನ ಚಿಕ್ಕಪ್ಪನಿಗೆ ನೀನು ಕೇಳಲು ಯಾರು ನಿನ್ನನ್ನು ಹೊಡೆದು ಸಾಯಿಸುತ್ತೇವೆ ಎಂದು ಹೊಡೆದಿದ್ದರಂತೆ. ಆರೋಪಿತರ ಪೈಕಿ 1 ನೇ ಆರೋಪಿ ಲಾಂಗ್ ಮಚ್ಚಿನಿಂದ ನನ್ನ ಚಿಕ್ಕಪ್ಪನ ತಲೆಗೆ ಹೊಡೆದಿದ್ದನಂತೆ. 2 ನೇ ಆರೋಪಿ ಲಾಂಗ್ ನಿಂದ ನನ್ನ ಚಿಕ್ಕಪ್ಪನ ಬಲ ಗಾಲಿನ ತೊಡೆಗೆ ಹೊಡೆದಿದ್ದನಂತೆ. ಪೊಲೀಸರು ನನ್ನನ್ನು ಕರೆದು ವಿಚಾರೆ ಮಾಡಿದ್ದರು. ಬಟ್ಟೆಗಳನ್ನು ಗುರುತಿಸುವ ಬಗ್ಗೆ ನನಗೆ ಪೊಲೀಸರು ಫೋನ್ ಮಾಡಿದ್ದರು. ನಾನು ನನ್ನ ಚಿಕ್ಕಪ್ಪನ ಪ್ಯಾಂಟ್ ಮತ್ತು ಶರ್ಟ್ ಅನ್ನು ನೋಡಿ ಗುರುತಿಸಿದ್ದೆ ಅವುಗಳಿಗೆ ರಕ್ತ ಆಗಿತ್ತು. ನಾನು ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.

( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ರಕ್ತಮಯವಾದ ಪ್ಯಾಂಟ್ ಮತ್ತು ಶರ್ಟ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಒ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಆರೋಪಿ ಪರ ವಕೀಲರಿಂದ :**

**1 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಖರ್ಚು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.